# ಕತ್ತಲೆಯ ದಾರಿಯಲ್ಲಿ ಮ್ಯಾರಥಾನ್

'ಊರಿನ ಕಣ್ಮಣಿಗಳಾದ ಚಂದ್ರವಾರಿಯರ್ ಮತ್ತು ಸುಮಕ್ಕನು...' – ಸುಮಕ್ಕನ ಹೆಸರಿನ ಜೊತೆಗೆ ಈತನಕ ಅಂಕಲ್‌ನ ಹೆಸರು ಮಾತ್ರ ಸೇರಿಸಲಾಗುತ್ತಿತ್ತು.

ಪರಮು ಬಂಗ್ಲೆಯ ಗೇಟಿಗೆ ಕಾವಲು ಕುಳಿತ. ಚಂದ್ರವಾರಿಯರ್ಗೆ ಪಕ್ಷದ ಹಳೆಯ ನಾಯಕನನ್ನು ಭೇಟಿಯಾಗುವ ಮನಸ್ಸಾಗಲಿಲ್ಲ.

ಸಂಜೆ ನಾನು ಮತ್ತು ಶ್ರೀದೇವಿ ಅಂಕಲ್‌ನ ಕೋಣೆಗೆ ಹೋಗಿ ನೋಡಿದೆ. ಬಾಗಿಲಿಗೆ ಒಳಗಿನಿಂದ ಬೀಗ ಹಾಕಿದ್ದರು. ಒಂದು ವಿಷಾದಗಾನದ 'ಹಮ್ಮಿಂಗ್'ನಂತೆ ಅಂಕಲ್‌ನ ಸಣ್ಣಗಿನ ಬಿಕ್ಕುವಿಕೆ ಬೀಗದ ಕೈ ರಂಧ್ರದಿಂದ ಹೊರ ಹೊಮ್ಮುತ್ತಿತ್ತು.

ಚಂದ್ರವಾರಿಯರ್‌ರವರ ಮೀಟಿಂಗ್‌ನಲ್ಲಿ ಭಾಗವಹಿಸದೇ ಇದ್ದಾಗ ಸುಮಕ್ಕನ ದ್ವೇಷ ತೀವ್ರವಾಯಿತು. ಬಹುತೇಕ ಮಾತುಕತೆಯೇ ಇಲ್ಲದಂತಾಯಿತು. ಅದಕ್ಕೋಸ್ಕರವೇ ಅಂಕಲ್ ನಮಗೆ ಹತ್ತಿರವಾಗಲು ಪ್ರಯತ್ನಿಸಿದರು.

ಅಂಕಲ್‌ನ ಮೇಲೆ ಕೊಂಚ ಅಸೂಯೆಯಿದ್ದರೂ ಮಂಡಲ ಕಮಿಟಿ ಕಾರ್ಯದರ್ಶಿ ಆಗಲೂ ಅವರ ಜೊತೆಗಿದ್ದರು. ಅವರನ್ನು ಬದಲಾಯಿಸಲೆಂದೇ ಸಮಿತಿಯ ಸಭೆ ಕರೆದಿದ್ದೆಂದು ನನಗೆ ಗೊತ್ತಾಗಲಿಲ್ಲ. ಸದ್ಯಕ್ಕೆ ಸಮಿತಿಯ ಸಭೆಗೆ ಹೋಗುವುದು ಬೇಡವೆಂದು ನಾನು ಪ್ರಯಾಣ ಹೊರಟೆ. ಮರಳಿ ಬಂದಾಗ ಕಾರ್ಯದರ್ಶಿಯ ಬದಲಾವಣೆಯಾಗಿತ್ತು. ಫ್ರೆಡ್ಡಿಯ ಕಾರಿನಲ್ಲಿ ಹೋಗುತ್ತಿದ್ದ ಹಿಜಡಾನಂತೆ ಕಾಣುವ ಒಬ್ಬ ಯುವಕನನ್ನು ಹೊಸ ಕಾರ್ಯದರ್ಶಿಯನ್ನಾಗಿ ಮಾಡಿದ್ದರು. ಹಳೆಯ ಕಾರ್ಯದರ್ಶಿಯ ಮೇಲೆ ಹಲವಾರು ಹಣಕಾಸಿನ ಅವ್ಯವಹಾರಗಳ ಕುರಿತು ಆರೋಪಗಳನ್ನು ಹೇರಲಾಗಿತ್ತು. ಒಂದು ಮತದ ಅಂತರದಿಂದ ಹಿಜಡಾ ರೂಪಿ ಕಾರ್ಯದರ್ಶಿಯಾಗಿದ್ದು. ನನ್ನ ಒಂದು ಮತ ಇದ್ದಿದ್ದರೆ ಕೆಲವೊಮ್ಮೆ ಚುನಾವಣೆಯ ಚಿತ್ರವೇ ಬದಲಾಗುತ್ತಿತ್ತೆಂದು ಅಂಕಲ್‌ಗೆ ಅನ್ನಿಸಿರಬೇಕು. ಇದರೊಂದಿಗೆ ಅವರ ದ್ವೇಷವೂ ಇಮ್ಮಡಿಯಾಯಿತು.

ಇನ್ನು ಹಳೆಯ ಔಟ್‌ಹೌಸ್‌ಗೆ ನಿವಾಸವನ್ನು ಬದಲಾಯಿಸಬೇಕು. ಔಟ್‌ಹೌಸ್ ಸ್ವಚ್ಛಗೊಳಿಸುವಾಗಲೂ ಗೋಡೆಗೆ ಒಳ್ಳೆಯ ಬಣ್ಣ ಬಳಿಯುವಾಗಲೂ ಇಬ್ಬರೂ ಮಾತನಾಡಲಿಲ್ಲ. ಕೋಪವನ್ನು ತೋರ್ಪಡಿಸಲಿಲ್ಲ.

ಫ್ರೆಡ್ಡಿಯ ನೀಲಿ ಕಾರು ಊರಿಗೆ ಬರುವಾಗಲೆಲ್ಲಾ ನನಗೆ ಭಯವಾಗತೊಡಗಿತು. ಒಂದು ದಿನ ಬ್ಯಾಂಕ್‌ನ ಮುಂದೆ ನಿಂತಿದ್ದ ಫ್ರೆಡ್ಡಿಯ ಕಾರಿಗೆ

